ಓ.ಎಸ್. ನಂಃ 72/2022
ಪಿ.ಡಬ್ಲ್ಯೂ-1 (ಲಕ್ಷ್ಮೀ)

ದಿನಾಂಕ: 06-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಎಸ್.ಜಿ.ಟಿ. ಪ್ರತಿವಾದಿ 2 ಮತ್ತು 28 ರವರ ಪರ ವಕೀಲರಿಂದಃ**

ನಾನು ವಿದ್ಯಾಭ್ಯಾಸ ಮಾಡಿಲ್ಲ. ನನಗೆ ಓದಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಗೊತ್ತಿಲ್ಲ. ನಾನು ಖಾಯಂ ಆಗಿ ನನ್ನ ಗಂಡನ ಊರಾದ ಚಿಕ್ಕೋಡಿ ತಾಲೂಕಿನ ಕರಗಾಂನಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ಈ ದಾವೆ ಹೂಡುವ ಸಮಯದಲ್ಲಿ ನಾನು ಮಂಗಳೂರಿಗೆ ದುಡಿಯಲು ಹೋಗಿದ್ದೆ. ನಾನು ಈ ದಾವೆ ಹೂಡುವ ಸಮಯದಲ್ಲಿ ನನ್ನ ಸ್ವಂತ ಊರು ಶಿಂಧಿಕುರಬೇಟ ಎಂದು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟಟಿರುತ್ತೇನೆ.

2. ನನ್ನ ಮದುವೆಯಾಗಿ ಈಗ 20 ವರ್ಷ ಮೇಲಾಗಿದೆ. ನನ್ನ ಮದುವೆಯನ್ನು ನನ್ನ ತಂದೆ ಮತ್ತು 2ನೇ ಪ್ರತಿವಾದಿ ಸೇರಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ತಮ್ಮ ತಂದೆ ಒಬ್ಬರೇ ಮಾತ್ರ ತಮ್ಮ ಮದುವೆ ಮಾಡಿದ್ದಾರೆ ಎಂದು ಹೇಳುತ್ತಾರೆ. ಮದುವೆ ಸಮಯದಲ್ಲಿ ಸಾಕಷ್ಟು ವರದಕ್ಷಿಣೆ ಕೊಟ್ಟು ಸಾಕಷ್ಟು ದುಡ್ಡು ಖರ್ಚು ಮಾಡಿ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮದುವೆ ಆದಾಗಿನಿಂದ ಇಲ್ಲೀಯವರೆಗು ನಾನು ನನ್ನ ಗಂಡನ ಮನೆಯಲ್ಲಿ ಇದ್ದೇನೆ ಎಂದರೆ ಸರಿ.

3. ದಾವಾ ಆಸ್ತಿ ನಮ್ಮ ತಂದೆ ಖರೀದಿ ಮಾಡಿದ ಆಸ್ತಿ ಆಗಿರುತ್ತದೆ. ನಮ್ಮ ತಂದೆ 2020 ರಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ. ನಮ್ಮ ತಂದೆ ತೀರಿಕೊಂಡ ನಂತರ ದಾವಾ ಆಸ್ತಿಯಲ್ಲಿ ನನಗೆ ಏನು ಪಾಲು ಬೇಡ, ನಮ್ಮ ತಂದೆಯ ಆಸ್ತಿ 2ನೇ ಪ್ರತಿವಾದಿಗೆ ಸೇರಲಿ ಎಂದು ಹೇಳಿ ನಾನು, 1ನೇ ವಾದಿ, ಪ್ರತಿವಾದಿ 1 ಮತ್ತು 28 ಸೇರಿ ಕಬೂಲಿ ಪತ್ರ ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

4. ಈಗ ಸಾಕ್ಷಿದಾರರಿಗೆ ವಾದ ಪತ್ರದಲ್ಲಿರುವ ತಮ್ಮ ಸಹಿಯನ್ನು ತೋರಿಸಿದ್ದು ಅದನ್ನು ನೋಡಿ ಸಾಕ್ಷಿದಾರರು ಅದು ತಮ್ಮ ಸಹಿ ಅಲ್ಲ ಎಂದು ಹೇಳುತ್ತಾರೆ. ಈಗ ಸಾಕ್ಷಿದಾರರಿಗೆ ಒಂದು ಕಬೂಲಿ ಪತ್ರದ ಧೃಡೀಕೃತ ನಕಲನ್ನು ತೋರಿಸಿದ್ದು ಅದನ್ನು ನೋಡಿ ಸದರಿ ಪತ್ರದಲ್ಲಿ ತಮ್ಮ ಸಹಿ ಇಲ್ಲ ಎಂದು ಹೇಳುತ್ತಾರೆ.

5. ಈ ದಾವೆ ಹೂಡುವ ಸುಮಯದಲ್ಲಿ ದಾವಾ ಅಸ್ತಿಯ ಉತಾರದಲ್ಲಿ 2ನೇ ಪ್ರತಿವಾದಿಯ ಹೆಸರು ಮಾತ್ರ ಇತ್ತು ಎಂದರೆ  ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ 2ನೇ ಪ್ರತಿವಾದಿಯ ಹೆಸರು ಮಾತ್ರ ಏಕೆ ದಾಖಲ ಆಯಿತು ಎಂದು ತಿಳಿದುಕೊಳ್ಳಲು ಕಾಗದ ಪತ್ರಗಳನ್ನು ತೆಗೆಯಿಸಿಲ್ಲ. ದಿನಾಂಕ 08/10/2020 ರಂದು ನಾನು, 1ನೇ ವಾದಿ ಹಾಗೂ ಪ್ರತಿವಾದಿ 1 ಮತ್ತು 28 ಸೇರಿಕೊಂಡು 2ನೇ ಪ್ರತಿವಾದಿಯ ಹೆಸರಿಗೆ ಕಬೂಲಿ ಪತ್ರ ಬರೆದುಕೊಟ್ಟ ಪ್ರಕಾರ ದಾವಾ ಅಸ್ತಿಗೆ 2ನೇ ಪ್ರತಿವಾದಿಯ ಹೆಸರು ದಾಖಲ ಆಗಿರುತ್ತದೆ ಎಂದರೆ ಸರಿಯಲ್ಲ.

6. ನಾವು ಕಬೂಲಿ ಪತ್ರ ಬರೆದುಕೊಟ್ಟ ನಂತರ 2ನೇ ಪ್ರತಿವಾದಿ ದಾವಾ ಆಸ್ತಿಗೆ ತನ್ನ ಹೆಸರು ಹಚ್ಚಿಕೊಳ್ಳಲು ತಹಸೀಲ್ದಾರ ಕಚೇರಿಯಲ್ಲಿ ಅರ್ಜಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ 2ನೇ ಪ್ರತಿವಾದಿಯ ಹೆಸರು ದಾಖಲ ಆಗುವ ಪೂರ್ವದಲ್ಲಿ ತಹಸೀಲ್ದಾರರ ಕಚೇರಿಯಿಂದ ನನಗೆ, 1ನೇ ವಾದಿಗೆ ಹಾಗೂ ಪ್ರತಿವಾದಿ 1 ಮತ್ತು 28 ರವರಿಗೆ ನೋಟೀಸು ಬಂದಿದ್ದವು ಎಂದರೆ ನನಗೆ ಗೊತ್ತಿಲ್ಲ. ಸದರಿ ನೋಟೀಸಗಳನ್ನು ನಾವು ಸ್ವೀಕರಿಸಿ ನಮ್ಮ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ವಿಚಾರವಾಗಿ ನಾನು, 1ನೇ ವಾದಿ, ಪ್ರತಿವಾದಿ 1 ಮತ್ತು 28 2ನೇ ಪ್ರತಿವಾದಿಯ ಹೆಸರಿಗೆ ಕಬೂಲಿ ಪತ್ರ ಬರೆದುಕೊಟ್ಟಿದ್ದರೂ ಸಹ ಬರೆದುಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 4ನೇ ಖಂಡಿಕೆಯಲ್ಲಿ ಹೇಳಿರುವ ವಿಷಯಗಳನ್ನು ಯಾವ ಆಧಾರದ ಮೇಲೆ ಬರೆಯಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳನ್ನು ನನಗೆ ಯಾರು ಓದಿ ಹೇಳಿಲ್ಲ. ನಾನು ನನ್ನ ಸಹಿಯನ್ನು ಮಾಡುತ್ತೇನೆ. ಈಗ ಸಾಕ್ಷಿದಾರರಿಗೆ ವಕೀಲ ಪತ್ರವನ್ನು ತೋರಿಸಿದ್ದು ಅದನ್ನು ನೋಡಿ ಅದರಲ್ಲಿಯು ಸಹ ತಮ್ಮ ಸಹಿ ಇರುವುದಿಲ್ಲ ಎಂದು ಹೇಳುತ್ತಾರೆ. ಈ ದಾವೆಯ ಬಗ್ಗೆ ನನಗೆ ಏನು ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಓ.ಎಸ್. ನಂಃ 72/2022
ಪಿ.ಡಬ್ಲ್ಯೂ-1 (ಲಕ್ಷ್ಮೀ)

**ಪಾಟೀಸವಾಲುಃ ಶ್ರೀ.ಬಿ.ಕೆ.ಜೆ. ಪ್ರತಿವಾದಿ 3,4,6,9 ರಿಂದ 12,14 ರಿಂದ 19,22,24 ಮತ್ತು 25 ರವರ ಪರ ವಕೀಲರಿಂದಃ**

ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ